**ಸಾಕ್ಷಿಯನ್ನು ದಿನಾಂಕ 22.09.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಹೆಚ್.ಪಿ.ಎನ್ ವಕೀಲರಿಂದಃ**

9. ಪಾಲು ವಿಭಾಗದ ಸಂದರ್ಭದಲ್ಲಿ ದಾವಾ ಷೆಡ್ಯೂಲ್ ಎ ಮತ್ತು ಬಿ ಷೆಡ್ಯೂಲ್ ಸ್ವತ್ತುಗಳ ಸಂಬಂಧ ನಕಾಶೆ ಮಾಡಿಸಿದ್ದೆವು. ಅದನ್ನು ನಿ.ಪಿ.–11 ರಂತೆ ನ್ಯಾಯಾಲಯಕ್ಕೆ ಕೊಟ್ಟಿದ್ದೇವೆ. ನಿ.ಪಿ.–11 ರಲ್ಲಿ ದಾವಾ ಷೆಡ್ಯೂಲ್ ಬಿ ಸ್ವತ್ತನ್ನು ಗುರುತಿಸಿಲ್ಲ. ಸದರಿ ನಕಾಶೆಯಲ್ಲಿ ಮನೆಗಳು ಇರುವುದು ಮಾತ್ರ ತೋರಿಸಲಾಗಿದೆ ಮತ್ತು ಅದರಲ್ಲಿ ಜಮೀನು ಯಾವುದು ಇಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಬಿ ಸ್ವತ್ತನ್ನು ಪಾಲು ವಿಭಾಗದ ಸಂದರ್ಭದಲ್ಲಿ ಅಳತೆ ಮಾಡಿಸಿಲ್ಲ. ಸಾಕ್ಷಿ ಪುನಃ ಈಗ ಸದರಿ ಸ್ವತ್ತಿನ ಅಳತೆಗೆ ಅರ್ಜಿ ಕೊಟ್ಟಿದ್ದೇನೆ ಎನ್ನುತ್ತಾರೆ. ಪಾಲು ವಿಭಾಗದ ಸಂದರ್ಭದಲ್ಲಿ ದಾವಾ ಷೆಡ್ಯೂಲ್ ಬಿ ಸ್ವತ್ತಿನ ಅಸ್ತಿತ್ವದ ಬಗ್ಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ.

10. ದಾವಾ ಷೆಡ್ಯೂಲ್ ಬಿ ಸ್ವತ್ತಿನಲ್ಲಿ ಈಗ ಏನಿದೆ ಎಂಬ ಪ್ರಶ್ನೆಗೆ ಸಾಕ್ಷಿ ಅದರಲ್ಲಿ ಒಂದು ಶೀಟ್ ಹಾಕಲಾಗಿದೆ ಮತ್ತು ಉಳಿದ ಜಾಗ ಖಾಲಿ ಇದೆ ಎನ್ನುತ್ತಾರೆ. ಸದರಿ ಸ್ವತ್ತಿನಲ್ಲಿ ಬಿಲ್ಲವ ಸಮುದಾಯದವರು ಬ್ರಹ್ಮ ಶ್ರೀ ನಾರಾಯಣ ಗುರು ಭಜನಾ ಸಮಾಜದ ಮಂದಿರ ಇದೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಬಿ ಸ್ವತ್ತನ್ನು 1998 ರಲ್ಲಿ ಬಿಲ್ಲವ ಸಂಘದ ಅಧ್ಯಕ್ಷರಾಗಿದ್ದ ಚಂದ್ರಶೇಖರ್ ಎಂಬುವವರು ಸಂಘದ ಪರವಾಗಿ ವಿಶ್ವನಾಥ ಎಂಬುವವರಿಂದ

ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಎಂ. ಲಿಂಗಯ್ಯ ಬಿನ್ ಮಲ್ಲಯ್ಯ ಎಂದರೆ ಯಾರು ಎನ್ನುವುದು ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಬಿ ಸ್ವತ್ತನ್ನು ಮೂಲತಃ ವಿಶ್ವನಾಥ ರವರು ಎಂ.ಲಿಂಗಯ್ಯ ಬಿನ್ ಮಲ್ಲಯ್ಯ ರವರಿಂದ ದಿನಾಂಕ 27.05.1991 ರಂದು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ವಿಷಯ ನನಗೆ ಗೊತ್ತಿಲ್ಲ.

11. ವಿ.ಭೀಮರಾವ್ ಬಿನ್ ವೆಂಕೋಬಾ ರಾವ್ ಎಂಬುವವರು ನನ್ನ ತಂದೆ. ನನ್ನ ತಂದೆಗೆ ನಾನು, ವೆಂಕೋಬರಾವ್, ರುಕ್ಮೋಜಿ ರಾವ್ ಮತ್ತು ಲೋಕೇಶ್ ಎಂಬ 4 ಗಂಡು ಮತ್ತು ಶಾಂತ ಬಾಯಿ ಮತ್ತು ಸರಸ್ವತಿ ಎಂಬ ಇಬ್ಬರು ಹೆಣ್ಣು ಮಕ್ಕಳು. ನನ್ನ ತಂದೆ ವಿ.ಭೀಮರಾವ್ ಬಿನ್ ವೆಂಕೋಬಾ ರಾವ್ ದಿನಾಂಕ 11.10.1962 ರಂದು ದಾವಾ ಷೆಡ್ಯೂಲ್ ಬಿ ಸ್ವತ್ತನ್ನು ಎಂ.ಲಿಂಗಯ್ಯ ಎಂಬುವವರಿಗೆ ಮಾರಾಟ ಮಾಡಿದ್ದರು ಎನ್ನುವುದು ಸುಳ್ಳು. ಆ ಸಂಬಂಧ ನಾನು ಯಾವುದೇ ದಾಖಲೆ ನೋಡಿಲ್ಲ. ನಾನು ಹಾಗೂ ನನ್ನ ಸಹೋದರರು ಅಪ್ರಾಪ್ತ ವಯಸ್ಕರಾದ ಕಾರಣ ನನ್ನ ತಂದೆ ನಮ್ಮ ಪರವಾಗಿ ಸದರಿ ಸ್ವತ್ತನ್ನು ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಎಲ್ಲಾ ಕ್ರಯ ಪತ್ರಗಳಲೂ ದಾವಾ ಷೆಡ್ಯೂಲ್ ಬಿ ಸ್ವತ್ತನ್ನು ಸರ್ವೆ ನಂಬರ್ 55, ನಿವೇಶನ ಸಂಖ್ಯೆ 63/64, ವಿಸ್ತೀರ್ಣ $\frac{64+57}{2}$ x 80 ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಬಿ ಸ್ವತ್ತು ನಗರ ಸಭೆ ವತಿಯಿಂದ ಬಂದ ನಂತರವೂ ಎಲ್ಲ ದಾಖಲೆಗಳಲೂ ಮೇಲೆ ಹೇಳಿದ ವಿಸ್ತೀರ್ಣವನ್ನೇ ನಮೂದಿಸಲಾಗಿದೆ ಎಂದರೆ ಸರಿಯಲ್ಲ.

12. ದಾವಾ ಷೆಡ್ಯೂಲ್ ಬಿ ಸ್ವತ್ತನ್ನು ಖರೀದಿ ಮಾಡಿದ್ದ ವಿಶ್ವನಾಥರವರು ಅದನ್ನು ಭೂ ಪರಿವರ್ತನೆ ಮಾಡಿಸಿ ನಿವೇಶನಗಳಾಗಿ ಮಾರ್ಪಾಡು ಮಾಡಿ ಚಂದ್ರಶೇಖರ್ ಮತ್ತಿತರಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಚಂದ್ರಶೇಖರ್ ರವರು ಬ್ರಹ್ಮ ಶ್ರೀ ನಾರಾಯಣ ಗುರು ಸಂಘದ ಅಧ್ಯಕ್ಷರಾಗಿದ್ದರು ಎನ್ನುವುದು ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಬಿ ಸ್ವತ್ತಿನಲ್ಲಿ ಚಂದ್ರಶೇಖರ್ ರವರೇ ಭಜನಾ ಮಂದಿರ ಕಟ್ಟಿಸಿ ಅದರ ಸುತ್ತಲೂ ಬೇಲಿ ಹಾಕಿಸಿದ್ದರೂ ಎಂದರೆ ಸರಿಯಲ್ಲ.

13. ಪ್ರತಿವಾದಿ ಈಗ ಬ್ರಹ್ಮ ಶ್ರೀ ನಾರಯಾಣ ಗುರು ಸಂಘದ ಅಧ್ಯಕ್ಷರಾಗಿ ದಾವಾ ಷೆಡ್ಯೂಲ್ ಬಿ ಸ್ವತ್ತಿನಲ್ಲಿರುವ ಸಂಘದ ಭಜನಾ ಮಂದಿರವನ್ನು ನಡೆಸುತ್ತಿದ್ದಾರೆ ಮತ್ತು ಸದರಿ ವಿಷಯ ನನಗೆ ಗೊತ್ತು ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಬಿ ಸ್ವತ್ತಿನಲ್ಲಿ ಈಗ ಏನಿದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಫೋಟೋ ಕೊಡಲು ನನಗೆ ತೊಂದರೆ ಇಲ್ಲ.

14. ದಾವಾ ಷೆಡ್ಯೂಲ್ ಬಿ ಸ್ವತ್ತಿಗೆ ಸಂಬಂಧಪಟ್ಟಂತೆ ಭದ್ರಾವತಿ ನ್ಯಾಯಾಲಯಗಳಲ್ಲಿ ಇವರೆಗೂ ಒಟ್ಟು 5-6 ದಾವೆಗಳನ್ನು ದಾಖಲಿಸಿದ್ದೇನೆ. ಸದರಿ ದಾವೆಗಳನ್ನು ಶ್ರೀನಿವಾಸ್, ಗೋವಿಂದ ಮತ್ತಿತರ ವಿರುದ್ಧ ದಾಖಲಿಸಿದ್ದೇನೆ. ಎಷ್ಟು ದಾವೆ ವಾಪಸ್ಸು ಪಡೆದ್ದೀರಿ ಎಂದರೆ ಸಾಕ್ಷಿ ಯಾವುದನ್ನು ವಾಪಸ್ಸು ಪಡೆದಿಲ್ಲ ಎನ್ನುತ್ತಾರೆ. ಶ್ರೀನಿವಾಸ್ ಎಂಬುವವರ ವಿರುದ್ಧ ಅಸಲು ದಾವೆ ಸಂಖ್ಯೆ 412/2018 ರಂತೆ ಸಲ್ಲಿಸಿದ್ದೆ ಮತ್ತು ಅದನ್ನು ವಾಪಸ್ಸು ಪಡೆದಿದ್ದೇನೆ

ಎಂದರೆ ಸಾಕ್ಷಿ ವಾಪಸ್ಸು ಪಡೆದಿಲ್ಲ, ವಕೀಲರನ್ನು ಬದಲಾಯಿಸಿದ್ದೇನೆ ಎನ್ನುತ್ತಾರೆ. ದಂಡ ಪಾವತಿ ಮಾಡಿ ಸದರಿ ದಾವೆಯನ್ನು ವಾಪಸ್ಸು ಪಡೆದ ನಂತರ ಹೊಸದಾಗಿ ಮತ್ತೆ ದಾವೆ ಹಾಕಿಲ್ಲ. ನಾನು ದಾವಾ ಸರ್ವೆ ನಂಬರ್ 55 ರ ಸಂಬಂಧ ಈ ಹಿಂದೆ ದಾಖಲಿಸಿದ್ದ 5–6 ದಾವೆಗಳ ಪೈಕಿ 3–4 ದಾವೆಗಳು ವಜಾ ಆಗಿವೆ ಎಂದರೆ ಸರಿಯಲ್ಲ. ಸದರಿ ದಾವೆಗಳಲ್ಲಿ ನಾನು ಸರ್ವೆ ನಂಬರ್ 55 ರಲ್ಲಿ ಸ್ವಾಧೀನ ಇಲ್ಲ ಎಂದು ತೀರ್ಮಾನ ಆಗಿದೆ ಎಂದರೆ ಸರಿಯಲ್ಲ.

15. ನಾನು ಮತ್ತು ನನ್ನ ಸಹೋದರರು ಪ್ರಾಪ್ತ ವಯಸ್ಕರಾದ ನಂತರವೂ ನನ್ನ ತಂದೆ ಅವರಿಗೆ ಸೇರಿದ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಬರೆದುಕೊಟ್ಟಿರುವ ಕ್ರಯ ಪತ್ರಗಳನ್ನು ನಾನು ಅಥವಾ ನನ್ನ ಸಹೋದರರು ಎಲ್ಲಿಯೂ ಪ್ರಶ್ನೆ ಮಾಡಿಲ್ಲ. ದಾವಾ ಷೆಡ್ಯೂಲ್ ಬಿ ಸ್ವತ್ತಿನ ಖಾತೆ–ಕಂದಾಯ ದಾಖಲೆಗಳೆಲ್ಲವೂ ಈ ಹಿಂದೆ ಗ್ರಾಮ ಪಂಚಾಯತಿ ಮತ್ತು ಈಗ ನಗರ ಸಭೆಯಲ್ಲಿ ಬಿಲ್ಲವ ಸಂಘದ ಹೆಸರಿಗೆ ಇದೆ ಎಂದರೆ ಸರಿಯಲ್ಲ.

16. ದಾವಾ ಸರ್ವೆ ನಂಬರ್ 55 ರಲ್ಲಿ ಎಷ್ಟು ಜಮೀನು ಇದೆ, ಸದರಿ ಜಮೀನಿನಲ್ಲಿ ಏನಿದೆ ಎಂಬುವುದನ್ನು ನಾನು ನೋಡಿಲ್ಲ ಮತ್ತು ಸದರಿ ಜಮೀನಿನ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಬಿ ಸ್ವತ್ತಿನಲ್ಲಿ ಪ್ರತಿವಾದಿಯ ಮನೆ, ಭಜನಾ ಮಂದಿರ ಇದ್ದು, ಅಷ್ಟು ಜಾಗಕ್ಕೆ ಪ್ರತಿವಾದಿ ಬೇಲಿ ಹಾಕಿಕೊಂಡಿರುವ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ನಾನು ಯಾವತ್ತು ಸ್ವಾಧೀನದಲ್ಲಿ ಇಲ್ಲ ಹಾಗಾಗಿ

ಪ್ರತಿವಾದಿ ನನಗೆ ಯಾವತ್ತು ತೊಂದರೆ ಕೊಡುವ ಸಂದರ್ಭದವೇ ಬಂದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಯಾವ ರೀತಿ ತೊಂದರೆ ಕೊಟ್ಟರು ಎಂಬ ಪ್ರಶ್ನೆಗೆ ಸಾಕ್ಷಿ ನಮ್ಮ ಜಾಗ ಎಂದು ನಾನು ಪ್ರತಿವಾದಿಯನ್ನು ಕೇಳಲು ಹೋಗಿದ್ದೆ ಆಗ ಜನರೆಲ್ಲಾ ಸೇರಿಕೊಂಡರು ಮತ್ತು ದಾವಾ ಷೆಡ್ಯೂಲ್ ಬಿ ಸ್ವತ್ತನ್ನು ನಿಮ್ಮ ತಂದೆ ಕೊಟ್ಟಿದ್ದಾರೆ ಎಂದು ನನಗೆ ಹೇಳಿದರು ಎನ್ನುತ್ತಾರೆ. ಸದರಿ ದಿನ ಯಾವುದೇ ಗಲಾಟೆ ಆಗಿಲ್ಲ. ನನ್ನ ತಂದೆ ದಾವಾ ಷೆಡ್ಯೂಲ್ ಬಿ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂಬ ಸತ್ಯಾಂಶವನ್ನು ಪ್ರತಿವಾದಿ ನನಗೆ ಹೇಳಿದ್ದರೆ ಹೊರತು ನನಗೆ ಯಾವುದೇ ರೀತಿಯಲೂ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ವಿರುದ್ಧ ನಾನು ಪೊಲೀಸರಿಗೆ ದೂರು ಕೊಟ್ಟಿಲ್ಲ.

17. ದಾವಾ ಷೆಡ್ಯೂಲ್ ಬಿ ಸ್ವತ್ತಿನಲ್ಲಿ ನಾನು ಯಾವುದೇ ಮನೆ ಕಟ್ಟಿಕೊಂಡಿಲ್ಲ. ಸಾಕ್ಷಿ ಪುನಃ ಸದರಿ ಜಾಗ ನಮಗೆ ಸೇರಿದ ಜಮೀನಿನ ಗಡಿಯ ಒಳಗೆ ಇದೆ ಎನ್ನುತ್ತಾರೆ. ಸದರಿ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು-ಅಧಿಕಾರ ಅಥವಾ ಸ್ವಾಧೀನ ಇಲ್ಲದೆ ಇದ್ದರೂ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.-1 ರ ಪಾಲು ವಿಭಾಗದ ದಾಖಲೆಯನ್ನು ಸೃಷ್ಟಿಮಾಡಲಾಗಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**